

ಅರಚುತ್ತಾರೆ, ಪಾರ್ವತಿಯು ಗಿಡಗಳ 'ಪಾತಿ'ಯಾಗಿಬಿಡುತ್ತಾಳೆ! ವಾಸಂತಿಯು 'ವಾಸಿ'ಯಾಗಿಬಿಡುತ್ತಾಳೆ, ಆಕೆಗೆ ಏನು ಕಾಯಿಲೆ ಇಲ್ಲದಿದ್ದರೂ. ಸರಿತಾ ಪಾಪ, ಯಾವಾಗಲೂ ಹತ್ತಿರದವರಿಂದ 'ಸರಿ'ಯುತ್ತಲೇ ಇರುತ್ತಾಳೆ, ಇಲ್ಲಾ ತಪ್ಪಾಗಿದ್ದರೂ ಸರಿ ಅಂತಾನೇ ಅನಿಸಿಕೊಳ್ಳುತ್ತಿರುತ್ತಾಳೆ! ಭಾಗ್ಯ 'ಭಾಗಿ'ಯಾದರೆ, ಅರ್ಚನಾ 'ಅಚ್ಚು' ಆಗುತ್ತಾಳೆ. ಇನ್ನು ಕೆಲವರಿಗೆ ಇಂಗ್ಲಿಷ್ ಮೋಹ. ನಾಮವನ್ನು ಮೊಟಕುಗೊಳಿಸಿ ಅದಕ್ಕೆ ಇಂಗ್ಲಿಷ್ ಲೇಪ ಹಚ್ಚುವುದು. ಜಾನಕೀರಾಂ ಜಾನ್ ಆದರೆ, ಸಮರ್ಥ ಸ್ಯಾಮ್ ಆಗುತ್ತಾನೆ. ರಮೇಶ್ ರ್‍ಯಾಮ್ (ಇಂಗ್ಲಿಷ್–ಕನ್ನಡ ನಿಘಂಟುವಿನಲ್ಲಿ ರ್‍ಯಾಮ್ ಎಂದರೆ ಗಂಡುಕುರಿ ಎಂದರ್ಥವಿದೆ!) ಎಂದಾದರೆ, ಕೃಷ್ಣ ಕ್ರಿಶ್ (ಸದ್ಯ ಕ್ರಶ್ ಅಲ್ವಲ್ಲ) ಆಗುತ್ತಾನೆ.

ಮತ್ತೆ ಕೆಲವರಿಗೆ ಒಂದು ನಾಮ ಸಾಲದು ಅಂತ ಎರಡು ಅಥವಾ ಮೂರು ನಾಮಗಳಿರುತ್ತವೆ. 'ದೇವನೊಬ್ಬ ನಾಮ ಹಲವು' ಎಂಬಂತೆ ಬಹುನಾಮಿಗಳು ಇವರು. ಸಿನಿಮಾದವರಿಗೆ ಇದು ಮಾಮೂಲು ಬಿಡಿ. ಸಿನಿಮಾ ಸೇರುವಾಗ ಮೊದಲಿನ ನಾಮಕ್ಕೆ ಅದೃಷ್ಟ ಇಲ್ಲವೆಂದು ಬೇರೆ ನಾಮ ಇಡುತ್ತಾರೆ/ಇಡಿಸಿಕೊಳ್ಳುತ್ತಾರೆ. ಈಗಂತೂ ಹೆಸರಿನ ಅಕ್ಷರಗಳ ಸಂಖ್ಯೆ ನೋಡಿ ಆ ನಾಮ ಒಳ್ಳೆಯದೋ ಅಲ್ಲವೋ ಎಂದು ಹೇಳುವವರೂ ಇದ್ದಾರೆ. ಅದೃಷ್ಟವನ್ನೇ ತಮ್ಮ ಬಳಿ ಬರುವಂತೆ ಮಾಡಲು ಎಷ್ಟೋ ಜನರು ತಮ್ಮ ಮೊದಲ ಹೆಸರನ್ನು ಸಂಖ್ಯೆಗನುಗುಣವಾಗಿ ಬದಲಾಯಿಸಿಕೊಳ್ಳುತ್ತಾರೆ. ಮಗುವಿಗೆ ನಾಮಕರಣ ಮಾಡುವಾಗ ಮೂರು ಅಥವಾ ಐದು ಹೆಸರುಗಳನ್ನು ಇಡುವುದು ವಾಡಿಕೆ. ನಕ್ಷತ್ರನಾಮ, ರಾಶಿಗೆ ಅನುಗುಣವಾಗಿ ಬರುವ ಅಕ್ಷರದಿಂದ ಪ್ರಾರಂಭವಾಗುವ ನಾಮ, ಹಿರಿಯರ ನಾಮ, ರೂಢಿನಾಮ, ಇಷ್ಟದೈವದ ನಾಮ ಹೀಗೆ. ಎಲ್ಲಾ ನಾಮಗಳು ಅಳಿಸಿಹೋಗಿ ಕೊನೆಗೆ ಉಳಿಯುವುದು ಯಾವಾಗಲೂ ಕರೆಯುವ ನಾಮವೇ. ಆ ನಾಮಕ್ಕೆ ಬಲ ಸಾಲದಿದ್ದರೆ ಮತ್ತೊಂದು ನಾಮ ಇರಿಸಿಕೊಳ್ಳಬಹುದು. ಒಟ್ಟಿನಲ್ಲಿ ನಾಮಗಳ ಸಂಖ್ಯೆ ಇಂತಿಷ್ಟೇ ಇರಬೇಕು ಎಂಬ ನಿಯಮವೇನಿಲ್ಲ.

ಹಿಂದೆ ಕೆಲವರಿಗೆ ತಮ್ಮ ಮಕ್ಕಳಿಗೆ ಏನು ಹೆಸರಿಡುವುದು ಎಂಬುದೇ ಗೊಂದಲವಾಗುತ್ತಿತ್ತು. ಶಾಲೆಗೆ ಸೇರಿಸುವಾಗಲೂ ಮಗುವಿನ ಹೆಸರು ಏನು ಎಂದು ಕೇಳಿದರೆ ತಬ್ಬಿಬ್ಬಾಗುವಂತಹ ಸ್ಥಿತಿ. ಆಗ ಶಾಲೆಯ ಮುಖ್ಯೋಪಾಧ್ಯಾಯರೇ ಒಂದು ಹೆಸರನ್ನು ಬರೆದುಕೊಂಡು ನಿಮ್ಮ ಮಗುವಿನ ಹೆಸರು ಇನ್ನು ಮೇಲೆ ಇಂತಹುದು ಎಂದು ಹೇಳುವ ಸ್ಥಿತಿಯೂ ಇತ್ತು. ಅಂತಹದೊಂದು ದೃಷ್ಟಾಂತವಿದು–ನನ್ನ ಗೆಳತಿಯ ತಂಗಿಯನ್ನು ಐದನೇ ವರ್ಷದಲ್ಲಿ ಶಾಲೆಗೆ ಸೇರಿಸುವಾಗ ಆಕೆಗೆ ಇನ್ನೂ ಹೆಸರಿಟ್ಟಿರಲಿಲ್ಲವಂತೆ. ಹೆಸರನ್ನು ರಿಜಿಸ್ಟರ್‌ನಲ್ಲಿ ಬರೆದುಕೊಳ್ಳಲು ಹೆಸರು ಕೇಳಿದಾಗ, 'ಇನ್ನೂ ಹೆಸರಿಟ್ಟಿಲ್ಲ. ಮನೆಯಲ್ಲಿ ಬೇಬಿ ಎನ್ನುತ್ತೇವೆ' ಎಂದರಂತೆ ಆಕೆಯ ತಂದೆ. ಮುಖ್ಯೋಪಾಧ್ಯಾಯರು 'ಸರಿ, ಬೇಬಿ ಎಂದೇ ಬರೆದುಕೊಳ್ಳುತ್ತೇವೆ' ಎಂದು ಹಾಗೆಯೇ ಬರೆದುಕೊಂಡರಂತೆ. ಆಕೆ ಬೆಳೆದು ವಿದ್ಯಾಭ್ಯಾಸ ಮುಗಿಸಿ, ಆಕೆಗೂ ಮದುವೆಯಾಗಿ ಬೇಬಿಗಳು ಹುಟ್ಟಿದ ನಂತರವೂ ಆಕೆ ಬೇಬಿಯೇ! ಮತ್ತೊಬ್ಬ ಹುಡುಗ ಬೆಳೆದು ದೊಡ್ಡವನಾದರೂ ಅವನ ಹೆಸರು ಇನ್ನೂ ಪಾಪು ಎಂದೇ! ಇನ್ನೊಬ್ಬಳಿಗೆ ಶ್ರೀಭುವನೇಶ್ವರಿ ದೇವಿ ಎಂಬ ಉದ್ದವಾದ ಹೆಸರಿದ್ದು, ನಾವು ನಮ್ಮ ಅನುಕೂಲಕ್ಕಾಗಿ ಆಕೆಯ ಹೆಸರನ್ನು ಚಿಕ್ಕದಾಗಿ 'ಭುವಿ' ಎಂದೋ, 'ಭುವನಾ' ಎಂದೋ ಕರೆಯುತ್ತಿದ್ದೆವು. ಇದು ಆಕೆಯ ತಂದೆಗೆ ತಿಳಿದು ಗಂಭೀರವಾಗಿ 'ನನ್ನ ಮಗಳ ಹೆಸರನ್ನು ನಿಮಗೆ ಬೇಕಾದಂತೆ ಕರೆಯಕೂಡದು. ನಾವು ಆಕೆಗೆ ಏನು ಹೆಸರಿಟ್ಟಿದ್ದೇವೋ ಹಾಗೆಯೇ ಪೂರ್ತಿಯಾಗಿ ಕರೆಯಬೇಕು' ಎಂದು ಕಟ್ಟಪ್ಪಣೆ ಮಾಡಿದ್ದರು! ನಾವೂ

